ನಿಡುಗಣ್ಣುಗಳಿಂದ ವೆಂಕಣ್ಣಯ್ಯನವರನ್ನು ನೋಡುತ್ತಿರಲು ಅವರು ನಡೆದ ವಿಷಯವನ್ನೆಲ್ಲ ವಿವರಿಸಿದರು. ಅದನ್ನು ಕೇಳಿ ರಾಜೀವಲೋಚನಂ ತಮ್ಮ ಕೋಪವನ್ನು ಹತ್ತಿಕ್ಕಲಾರದೆ, 'ವೆಂಕಣ್ಣಯ್ಯ ನೀನು ಮನುಷ್ಯನಲ್ಲ' ಎಂದರು. ಆಗ ವೆಂಕಣ್ಣಯ್ಯನವರು, 'ಅಯ್ಯಾ ಈ ಸಂದರ್ಭದಲ್ಲಿ ನಾನು ಇನ್ನೇನು ಮಾಡಬೇಕಿತ್ತು? ಮಗು ಇರುವವರೆಗೆ ನನ್ನ ಕರ್ತವ್ಯವನ್ನು ನಾನು ಮಾಡಿದೆ. ವೈದ್ಯರು ಬಂದು ನಿತ್ಯವೂ ಮಗುವನ್ನು ನೋಡಿಕೊಂಡು ಹೋಗುತ್ತಿದ್ದರು. ನಿನ್ನೆ, ಈ ದಿನ ಬೆಳಿಗ್ಗೆ ಸಹ ಅದನ್ನು ನೋಡಿದಾಗ ಗುಣಮುಖವಾಗುತ್ತಿದೆಯೆಂದು ತಿಳಿಸಿದರು. ಇದ್ದಕ್ಕಿದ್ದಂತೆ ಅದು ಅಸು ನೀಗಿದರೆ ಮುಂದೇನು ಮಾಡಬೇಕು? ನಾನು ನೀನು ಇಬ್ಬರೂ ಒಬ್ಬರೇ ಗುರುಗಳ ಶಿಷ್ಯರು; ಗುರುಗಳ ಉಪದೇಶ ಕೇಳಿದ್ದೇವೆ. ಭಗವದ್ಗೀತೆ ಓದಿದ್ದೇವೆ. 'ಶಾಸ್ತ್ರ ಓದುವುದಕ್ಕೆ ಬದನೇಕಾಯಿ ತಿನ್ನುವುದಕ್ಕೆ' ಎಂದಾಗಬೇಕೇನು? ನಮ್ಮ ವೇದಾಂತ ಕರ್ಣನ ಅಸ್ತ್ರವಾದರೆ ಹೇಗೆ?' ಎಂದರು. ರಾಜೀವಲೋಚನಂ ಮತ್ತೊಮ್ಮೆ, 'ವೆಂಕಣ್ಣಯ್ಯ ನೀನು ಮನುಷ್ಯನಲ್ಲ' ಎಂದರು.

***

ವೆಂಕಣ್ಣಯ್ಯನವರು ದಿವಂಗತರಾಗುವುದಕ್ಕೆ ಸುಮಾರು ಆರು ತಿಂಗಳ ಮುನ್ನ ಒಂದು ರಾತ್ರಿ ಅವರ ಮನೆಯಲ್ಲಿ ಕಳ್ಳತನವಾಯಿತು. ಬೆಳಿಗ್ಗೆ ಎದ್ದು ನೋಡಿಕೊಂಡಾಗ ಮನೆಯಲ್ಲಿದ್ದುದೆಲ್ಲ ಸೂರೆಯಾಗಿಹೋಗಿತ್ತು. ಮನೆಯಲ್ಲಿದ್ದವರ ಮೈ ಮೇಲಿನ ಬಟ್ಟೆಗಳನ್ನು ಬಿಟ್ಟರೆ ಮತ್ತಾವ ವಸ್ತುವೂ ಉಳಿದಿಲ್ಲ. ಆಗ ಇನ್ನೂ ಮಲಗಿದ್ದ ವೆಂಕಣ್ಣಯ್ಯನವರನ್ನು ಎಬ್ಬಿಸಿ ಈ ವಿಚಾರವನ್ನು ತಿಳಿಸಿದುದಾಯಿತು. ಆದನ್ನು ಕೇಳಿ ಅವರ ಬಾಯಿಂದ ಬಂದ ಮೊದಲ ಮಾತೆಂದರೆ, "ಅಯ್ಯೋ ಪಾಪ! ಇದು ದೊಡ್ಡ ಪ್ರೊಫೆಸರರ ಬಂಗಲೆ ಎಂದು ಕಳ್ಳತನಕ್ಕಾಗಿ ಬಂದಿದ್ದಾರೆ! ಅವರಿಗೆ ಇಲ್ಲಿ ಏನು ಸಿಕ್ಕೀತು? ಪೆಟ್ಟಿಗೆಗಳನ್ನು ತೆರೆದು, ಹಣಕಾಸು, ಒಡವೆ ವಸ್ತುಗಳಿಲ್ಲದಿರುವುದನ್ನು ಕಂಡು, 'ಇವನೆಂಥ ದರಿದ್ರ ಪ್ರೊಫೆಸರು! ಇವನಿಗಿಂತ ನಾವೇ ವಾಸಿ' ಎಂದುಕೊಂಡರೇನೊ? ಇದ್ದಬದ್ದ ಹಳೆ ಬಟ್ಟೆಗಳನ್ನೆಲ್ಲ ಹೊತ್ತುಕೊಂಡು ಹೋಗಿದ್ದಾರೆ" ಹೀಗೆ ಹೇಳಿ ಗಟ್ಟಿಯಾಗಿ ನಕ್ಕರು. ಹೋದ ವಸ್ತುಗಳಲ್ಲಿ ಅವರು ಊಟ ಮಾಡುತ್ತಿದ್ದ ಬೆಳ್ಳಿ ತಟ್ಟೆಯೂ ಒಂದು. ಅದನ್ನು ಕೇಳಿ ಅವರು ನಗುತ್ತ 'ಊಟಕ್ಕೆ ಬೆಳ್ಳಿಯ ತಟ್ಟೆ ಬೇಡವೆಂದೆ, ಎಲ್ಲರಂತೆ ನಾನು ಆಲ್ಯೂಮಿನಿಯಂ ತಟ್ಟೆ ಹಾಕಿಕೊಳ್ಳುತ್ತೇನೆ ಎಂದೆ. ನೀವು ಅವಕಾಶ ಕೊಡಲಿಲ್ಲ. ಈಗ ನನ್ನ ಆದರ್ಶ ನೆರವೇರಿದಂತಾಯ್ತು. ಅದಕ್ಕಾಗಿ ಕಳ್ಳರಿಗೆ Thanks!' ಎಂದರು. ದೇವರ ಮಂಟಪದಲ್ಲಿದ್ದ ಬೆಳ್ಳಿಯ ವಿಗ್ರಹಗಳೆಲ್ಲ ಕಳುವಾಗಿದ್ದವು. ಅವರು ಅದನ್ನು ಕೇಳಿ ನಗುತ್ತ 'ದೇವರು ಬೆಳ್ಳಿ ಬಂಗಾರಗಳಲ್ಲಿ ಕಾಣಿಸಿಕೊಂಡರೆ ಅವನ ಗತಿ ಇಷ್ಟೇ ಸರಿ' ಎಂದರು. ಅಳುತ್ತಿದ್ದ ತಾಯಿಯನ್ನೂ, ಹೆಂಡತಿಯನ್ನೂ ಸಮಾಧಾನ ಮಾಡಿ, 'ಎಲ್ಲರೂ ಈಗಿಂದೀಗಲೆ ಸೊಸೈಟಿಗೆ ಹೊರಡಿ, ಯಾರು ಯಾರಿಗೆ ಯಾವ ಯಾವ ಬಟ್ಟೆ ಇಷ್ಟವೋ ಅದನ್ನು ಕೊಂಡುಕೊಳ್ಳಿ. ಇಷ್ಟೊಂದು ಸಣ್ಣ ವಿಚಾರಕ್ಕೆ ಇಷ್ಟು ಸಂಕಟಪಡಬೇಕೆ?' ಎಂದರು. ಅಂದು ವೆಂಕಣ್ಣಯ್ಯನವರ ಕಡೇ ಮಗನ ಹುಟ್ಟು ಹಬ್ಬ ಆಚರಿಸಬೇಕೆಂದು ಹಿಂದೆಯೇ ನಿಶ್ಚಯಿಸಲಾಗಿತ್ತು. ಇಂದು ಅದು ಬೇಡವೆಂದು ಹೆಂಡತಿ ಕಣ್ಣೀರು ಮಿಡಿಯುತ್ತ ತಿಳಿಸಿದರು. ಆದರೆ, ವೆಂಕಣ್ಣಯ್ಯನವರು 'ಇಷ್ಟು ಸಣ್ಣ ವಿಚಾರಕ್ಕೆ ಹಬ್ಬವನ್ನೇಕೆ ನಿಲ್ಲಿಸಬೇಕು' ಎಂದು ಅವರನ್ನು ಸಮಾಧಾನಪಡಿಸಿ, ಹೋಳಿಗೆ–ಪಾಯಸದ ಅಡುಗೆಯನ್ನು ಮಾಡಿಸಿದರು. ಎಲ್ಲರೂ ಹೊಸ ವಸ್ತ್ರವನ್ನು ಧರಿಸಿ, ಸಿಹಿ ಉಂಡು ಸಂತೋಷದಿಂದ ನಲಿಯುವಂತೆ ಮಾಡಿದರು. 'ಅಯ್ಯೋ ಪಾಪ, ವೆಂಕಣ್ಣಯ್ಯನವರ ಮನೆಯಲ್ಲಿ ಕಳ್ಳತನವಾಯಿತಂತೆ' ಎಂದುಕೊಂಡು ತಮ್ಮ ಸಂತಾಪವನ್ನು ಸೂಚಿಸಲೆಂದು ಬಂದ ಗೆಳೆಯರೆಲ್ಲರೂ ಆ ಮನೆಯ ಸಂಭ್ರಮವನ್ನು ಕಂಡು ಪೆಚ್ಚಾದರು. ಅವರಲ್ಲಿ ಕೆಲವರು ಅಲ್ಲಿಯೇ ರಸಕವಳವನ್ನು ಹೊಡೆದರು. 'ವೆಂಕಣ್ಣಯ್ಯನವರ ಮನೆಯ ಕಳ್ಳತನ' ಎಂಬುದು ಜನರ ಬಾಯಲ್ಲಿ ಒಂದು ಗಾದೆಯ ಮಾತಾಗಿ ಹೋಗಿತ್ತು.

ತ.ಸು. ಶಾಮರಾಯರ 'ಮೂರು ತಲೆಮಾರು' ಕೃತಿಯಲ್ಲಿನ 'ವೆಂಕಣ್ಣಯ್ಯನವರ ವ್ಯಕ್ತಿತ್ವ' ಲೇಖನದ ಆಯ್ದ ಭಾಗ.